ಶ್ರೀ ಎನ್. ಜಿ. ನರಸಿಂಹೇಗೌಡ.—ಪ್ರಪೋಸಲ್ ಕಳುಹಿಸಿರತಕ್ಕ ಡಿಸ್ಟ್ರಿಕ್ಟ್ ಬೋರ್ಡು ರೋಡುಗಳನ್ನು P.W.D. ರೋಡುಗಳನ್ನಾಗಿ ಪರಿವರ್ತನೆ ಮಾಡಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಮರಿಯಪ್ಪ.—ಮೊದಲು ರೋಡ್ ಕ್ಲಾಸಿಫಿಕೇಷನ್ ಕಮಿಟಿ ಇತ್ತು. ಅವರ ಶಿಫಾರಸ್ಸಿನ ಪ್ರಕಾರ ಕೆಲವನ್ನು ತೆಗೆದುಕೊಂಡರು. ಉಳಿದವನ್ನು ತೆಗೆದು ಕೊಂಡಿಲ್ಲ.

ಶ್ರೀ ಬಿ. ಎಸ್. ಶಂಕರಪ್ಪ.—ರೋಡ್ ಕ್ಲಾಸಿಫಿಕೇಷನ್ ಕಮಿಟಿಯವರು ಯಾವ ಆಧಾರದ ಮೇಲೆ ರಸ್ತೆಗಳನ್ನು ಕ್ಲಾಸಿಫೈ ಮಾಡಿದ್ದಾರೆ ?

ಶ್ರೀ ಟಿ. ಮರಿಯಪ್ಪ.—Importance of the road ಪ್ರಕಾರ, ಅಂದರೆ, ಆ ಸ್ಥಳಗಳಲ್ಲಿ ಬಸ್ ಸರ್ವೀಸ್ ಹಾಸ್ತಿ ಇದೆಯೇ ರೆಗ್ಯುಲೇಟೆಡ್ ಮಾರ್ಕೆಟ್ ಷಾಂಡಿ ಇದೆಯೇ ಒಂದೊಂದು ಡಿಸ್ಟ್ರಿಕ್ಟ್ ಬೋರ್ಡಿನಿಂದ ಎಷ್ಟೆಷ್ಟು ರಸ್ತೆಗಳಿಗೆ ಹೆಚ್ಚು ಗ್ಯಾರಂಟಿ ಕೊಟ್ಟರೆ ಪರವಾಯಿಲ್ಲ ಎಂಬುದನ್ನೆಲ್ಲಾ ನೋಡಿ ಕೊಂಡು ರಸ್ತೆಗಳನ್ನು ಆರಿಸಿ ತೆಗೆದುಕೊಳ್ಳುತ್ತೇವೆ.

Drinking Water Wells for Harijans in Challakere Taluk.

Q.—535. **Sri T. HANUMAIAH** (Challakere—Scheduled Castes).—

Will the Government be pleased to state) :—

(*a*) the villages in Challakere taluk where there are no drinking water wells for Harijans ;

(*b*) the arrangements made to provide drinking water wells to Harijans in the villages where they do not exist ?

A.—**Sri T. MARIAPPA** (Minister for Finance) [on behalf of SRI R. CHENNIGARAMIAH (Minister for Local Self-Government)].—

(*a*) 1 Purlehally
2 Surnehally
3 Kolamenahally
4 Bommanakote
5 Rekhalagere
6 Dasaramuthinahally

(*b*) They are taking water from private wells.

ಶ್ರೀ ಟಿ. ಹನುಮಯ್ಯ.—ಸ್ವಾಮಿ, ಎಷ್ಟೆಷ್ಟು ಕಡೆ ಕುಡಿಯುವ ನೀರಿನ ಬಾವಿಗಳಿಲ್ಲ! ಚಳ್ಳಕೆರೆ ತಾಲ್ಲೂಕಿನ ಆರು ಗ್ರಾಮಗಳನ್ನು ಬಿಟ್ಟು ಇತರೇ ಗ್ರಾಮಗಳಲ್ಲಿ ಕುಡಿಯುವ ನೀರಿನ ಬಾವಿಗಳಿವೆಯೇ ?

ಶ್ರೀ ಟಿ. ಮರಿಯಪ್ಪ.—ಪ್ರಶ್ನೆ ಕೇಳಿದ ಮೇಲೆ ರಿಪೋರ್ಟ್ ತರಿಸಿರತಕ್ಕದ್ದು. ಆರು ಗ್ರಾಮಗಳಲ್ಲಿ ಹರಿಜನರಿಗೆ ಪ್ರತ್ಯೇಕ ಬಾವಿಗಳಿಲ್ಲ ಎಂದು ಉತ್ತರ ಬಂದಿದೆ.

ಶ್ರೀ ಟಿ. ಹನುಮಯ್ಯ.—'They are taking water from private wells' ಎಂದು ತಾವು (ಬ)ನಲ್ಲಿ ಉತ್ತರ ಕೊಟ್ಟಿದ್ದೀರಿ. ಹಾಗಾದರೆ ಸವರ್ಣ ಹಿಂದೂಗಳ ಬಾವಿಗಳಿಂದ ನೀರು ತೆಗೆದುಕೊಳ್ಳುತ್ತಿದ್ದಾರೆಂದು ಭಾವನೆಯೇ ?

ಶ್ರೀ ಟಿ. ಮರಿಯಪ್ಪ.—ಇಲ್ಲಿರುವ ಇಕ್ವಿಫರ್ ಮೇಷ್ಟ್ರ ಪ್ರಕಾರ ಸವರ್ಣ ಹಿಂದುಗಳು ತಮ್ಮ ಬಾವಿಗಳಿಂದ ನೀರು ತೆಗೆದುಕೊಳ್ಳಲು ಅವಕಾಶ ಕೊಟ್ಟಿದ್ದಾರೆ. ಅವರು ಬಾವಿಗಳಿಗೆ ಗ್ಯಾರಂಟಿನ್ನು ತೆಗೆದು ಕೊಂಡಿಲ್ಲ. ಆದ್ದರಿಂದ ಪ್ರೈವೇಟ್ ಬಾವಿಗಳಿಂದ ತೆಗೆದುಕೊಳ್ಳುತ್ತಿದ್ದಾರೆ.

ಶ್ರೀ ಟಿ. ಹನುಮಯ್ಯ.—ಚಳ್ಳಕೆರೆ ತಾಲ್ಲೂಕಿನಲ್ಲಿ ಯಾವುದಾದರೂ ಒಂದು ಗ್ರಾಮದಲ್ಲಿ ಸವರ್ಣ ಹಿಂದುಗಳ ಬಾವಿಗಳಿಂದ ಹರಿಜನರು ನೀರು ತೆಗೆದು ಕೊಳ್ಳುತ್ತಾರೆಂದು ಗ್ಯಾರಂಟಿ ಕೊಡುತ್ತೀರಾ ?

ಶ್ರೀ ಟಿ. ಮರಿಯಪ್ಪ.—ಗ್ಯಾರಂಟಿ ನಾನು ಕೊಡುವುದಕ್ಕೆ ಆಗುವುದಿಲ್ಲ. ಇಲ್ಲಿ ಬಂದಿರುವ ಇಕ್ವಿಫರ್ ಮೇಷ್ಟ್ರ ಪ್ರಕಾರ ಎಲ್ಲಿಯೂ ಸವರ್ಣ ಹಿಂದೂಗಳು ನೀರು ತೆಗೆದುಕೊಳ್ಳಬೇಡಿ ಎಂದು ಹೇಳಲಿಲ್ಲ. ಎಲ್ಲಾ ಮಂತ್ರಿಗಳೂ ಅಲ್ಲಿಗೆ ಟೂರ್ ಹೋದಾಗ ಆ ರೀತಿ ಆಗಿದೆ ಎಂದು ಅವರ ಗಮನಕ್ಕೆ ಬಂದಿಲ್ಲ. ಆದ್ದರಿಂದ doubly armed ಆಗಿ ಉತ್ತರ ಕೊಡುತ್ತಿದ್ದೇನೆ.

ಶ್ರೀ ಟಿ. ಹನುಮಯ್ಯ.—ಚಳ್ಳಕೆರೆಯಲ್ಲಿ ಯಾವ ಒಂದು ಸವರ್ಣ ಹಿಂದೂಗಳ ಬಾವಿಯಲ್ಲೂ ಹರಿಜನರು ನೀರು ತೆಗೆದುಕೊಳ್ಳುವುದಿಲ್ಲ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಮರಿಯಪ್ಪ.—ನನ್ನ ಗಮನಕ್ಕೆ ಬಂದಿಲ್ಲ. ತಾವು ಹೇಳಿದ ಮೇಲೆ ವಿಚಾರ ಮಾಡುತ್ತೇನೆ.

Vesting of More Powers with the Backward Class Welfare Officers of Ex-Bombay Karnatak.

Q.—745. **Sri J. L. KABADI** (Indi S. C.).—

Will the Government be pleased to state :—

(*a*) whether the Backward Class Welfare Officers in the Districts of ex-Bombay Karnatak are proposed to be placed under the control of the Collectors to execute the schemes for the welfare of the Backward Classes ;

(*b*) if so, from what date ;

(*c*) whether they propose to vest these officers with more powers in the interest of Backward Classes instead of keeping them as liaison officers as at present ?

A.—Sri T. MARIAPPA (Minister for Finance) [on behalf of SRI R. CHENNIGARAMIAH (Minister for Local Self-Government)].—

(*a*) The matter is still under consideration.

(*b*) and (*c*) Do not arise in view of (*a*) above.

ಶ್ರೀ ಜೆ. ಎಲ್. ಕಬಾಡಿ.—ಇದನ್ನು ಪರಿಶೀಲನೆ ಮಾಡುವುದಕ್ಕೆ ಎಷ್ಟು ದಿವಸ ತೆಗೆದುಕೊಳ್ಳಬಹುದು ?

ಶ್ರೀ ಟಿ. ಮರಿಯಪ್ಪ.—ಪರಿಶೀಲನೆಗೆ ಸ್ವಲ್ಪಕಾಲ ಹಿಡಿಯುತ್ತದೆ.

ಶ್ರೀ ಜೆ. ಎಲ್. ಕಬಾಡಿ.—ಎಷ್ಟು ಕಾಲ ?

ಶ್ರೀ ಟಿ. ಮರಿಯಪ್ಪ.—ಈಗ ತಾನೆ ಇಂಟಿಗ್ರೇಷನ್ ಆಗಿದೆ. ಒಂದೊಂದು ಕಡೆ ಒಂದೊಂದು ತರಹ ಇರುವುದರಿಂದ ಆಲೋಚನೆ ಮಾಡುತ್ತಿದ್ದೇವೆ. ಡೈರೆಕ್ಟರ್ ಆಫ್ ಸೋಷಿಯಲ್ ವೆಲ್ ಫೇರ್ ಅವರಿಗೆ ಈ ವಿಚಾರ ತಿಳಿಸಿ ಬೇಗ ನುಸೂತ್ರವಾಗಿ ಕಾರ್ಯ ನಡೆಸಿ ಎಂದು ಡೈರೆಕ್ಷನ್ ಕೊಟ್ಟಿದ್ದೇವೆ.

Girls' Middle Schools in the State.

Q.—71. Sri S. KARIYAPPA (Virupakshipura).

Will the Government be pleased to state :—

(*a*) the number of Girls' Middle Schools in the State ;

(*b*) of these, the number of them n rural and urban areas ?

A.— Sri V. VENKATAPPA (Minister for Education).—

(*a*) 133

(*b*) (i) Rural areas ... 1

(ii) Urban areas ... 132

ಶ್ರೀ ಎಸ್. ಕರಿಯಪ್ಪ.—ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಬಾಲಕಿಯರ ಏಕಮಾತ್ರ ಮಾಧ್ಯಮಿಕ ಶಾಲೆ ಯಾವ ಊರಿನಲ್ಲಿದೆ ?

Srimathi GRACE TUCKER (Deputy Minister for Education).—Basavanahalli, Chickmagalur Taluk.

ಶ್ರೀ ಎಸ್. ಕರಿಯಪ್ಪ.—ಗ್ರಾಮಾಂತರ ಪ್ರದೇಶದಲ್ಲಿ ಈ ತರಹ ಬಾಲಕಿಯರ ಮಾಧ್ಯಮಿಕ ಶಾಲೆಯನ್ನು ತೆರೆಯಬೇಕೆಂದು ಇದುವರೆಗೂ ತಮಗೆ ಎಷ್ಟು ಅರ್ಜಿಗಳು ಬಂದಿವೆ ?

Srimathi GRACE TUCKER.—We have received none as yet.

ಶ್ರೀ ಎಸ್. ವೈ. ಪಾಟೀಲ್.—ಗ್ರಾಮಾಂತರ ಪ್ರದೇಶದಲ್ಲಿ 1, ಅರ್ಬನ್ ಪ್ರದೇಶದಲ್ಲಿ 132 ಎಂತ ಕೊಟ್ಟಿದೆ. ಇದು ಇಡೀ ಮೈಸೂರು ರಾಜ್ಯದ್ದೋ, ಹಳೆಯ ಮೈಸೂರು ರಾಜ್ಯದ್ದೋ ?

Srimathi GRACE TUCKER.—That is not only the ex-Mysore State but the whole of integrated Mysore.

ಶ್ರೀ ಎಸ್. ವೈ. ಪಾಟೀಲ್.—ಹಾಗಾದರೆ ಹಳೆಯ ಮೈಸೂರಿನದು ಎಷ್ಟು, ಹೊಸ ಮೈಸೂರಿನದು ಎಷ್ಟು ಎಂದು ಕೇಳುತ್ತೇನೆ.

Srimathi GRACE TUCKER.—In ex-Mysore State we have 128 and in the new Mysore areas there are five. That is because in the new Mysore areas we are talking of middle schools and high schools together ; in the old Mysore State we are talking of middle schools which are separate from high schools.

ಶ್ರೀ. ಎಸ್. ಜಿ. ನರಸಿಂಹೇಗೌಡ.—ಅರ್ಬನ್ ಪ್ರದೇಶದಲ್ಲಿ 132 ಮಿಡ್ಲ್ ಸ್ಕೂಲುಗಳನ್ನು ಕೊಟ್ಟಿರುವುದರಿಂದ ಇನ್ನುಮುಂದೆ ಕೊಡುವಾಗ ಹೆಚ್ಚಿನ ಭಾಗ ಗ್ರಾಮಾಂತರ ಪ್ರದೇಶಗಳಿಗೆ ಕೊಡುತ್ತೀರಾ ?

Srimathi GRACE TUCKER.—Yes, if there is need for the rural areas and if there are applications and if the department feels it would be necessary to get middle schools to the rural areas, it will be considered.

Sri V. P. DEENADAYALU NAIDU.—May I know the number of middle schools to be started in the Corporation area this year and under the next Five-Year Plan ?

Srimathi GRACE TUCKER.—That does not arise from this question.

Sri V. P. DEENADAYALU NAIDU.—May I know the number of schools that have been opened and proposed to be opened.....

Mr. SPEAKER.—She has already replied that that does not arise.

Sri V. P. DEENADAYALU NAIDU.—How many middle schools are there in the Corporation area, run by the Government ?

Srimathi GRACE TUCKER.—I would like to have notice.

ಶ್ರೀ ಎಸ್. ವೈ. ಪಾಟೀಲ್.—ಈಗ ಗ್ರಾಮಾಂತರ ಪ್ರದೇಶಗಳಿಂದ ರೆಪ್ರಸೆಂಟೇಷನ್ ಬಂದಿಲ್ಲ ಎಂದು ಅಪ್ಷನ್ ಕೊಡಿಸಿದರು. ಗ್ರಾಮಾಂತರ ಪ್ರದೇಶಗಳಿಂದ ರೆಪ್ರಸೆಂಟೇಷನ್ ಬರಲಿ ಬರದೇ ಇರಲಿ ಸರ್ಕಾರದವರೇ ಲಕ್ಷ್ಯ ಇಟ್ಟು ಹೆಚ್ಚು ಸ್ಕೂಲುಗಳನ್ನು ತೆರೆಯಲಿಕ್ಕೆ ಪ್ರಯತ್ನಮಾಡುವುದು ಸರ್ಕಾರದವರ ಕರ್ತವ್ಯವಲ್ಲವೇ ?

Srimathi GRACE TUCKER.—Yes, this will be considered on the needs of the locality and it will certainly be taken into consideration.